# ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಸಂತರ ಕೊಡುಗೆ

**ಸ್ವಾಮಿ ರಾಘವೇಶಾನಂದ**

ಭಾರತದಲ್ಲಿ ಮಾತ್ರ ಪ್ರತಿಯೊಂದು ಪ್ರಾಂತದಲ್ಲೂ, ಪ್ರತಿಯೊಂದು ಜನಾಂಗದಲ್ಲೂ ಅನೇಕ ಮಂದಿ ಸಾಧು, ಸಂತರುಗಳು ಆಗಿಹೋಗಿದ್ದಾರೆ. ಇವರು ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಅತ್ಯಂತ ಪ್ರಭಾವಶಾಲಿಗಳೆಂದು ಗುರುತಿಸಲ್ಪಡುತ್ತಾರೆ. ಕರ್ನಾಟಕದಲ್ಲಿ ಮಹತ್ವಪೂರ್ಣ ಸಾಧನೆ ಮಾಡಿದ ಸಂತರ ಬಗ್ಗೆ ವಿವರಿಸಿರುವ ಪೂಜ್ಯ ಸ್ವಾಮೀಜಿಯವರು ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

ಭಾರತೀಯ ಸಂಸ್ಕೃತಿ ಅನಾದಿಯಾದದ್ದು, ವಿಶಾಲವಾದದ್ದು. ಅದರ ಸಂಸ್ಕೃತಿಯನ್ನು ವೇದಗಳ ಕಾಲದಿಂದ ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವುದು ಈ ದೇಶದ ಸಾಧು-ಸಂತರು. ಈ ದೇಶವನ್ನು ಹೊರ ದೇಶಗಳಿಂದ ಬಂದು ಆಳಿದ ರಾಜಮಹಾರಾಜರುಗಳು, ನಮ್ಮ ದೇಶದ ಸಂಸ್ಕೃತಿಯನ್ನು ಬೆಳೆಸಿಕೊಂಡು ಬರುವುದಕ್ಕಿಂತ ಹೆಚ್ಚಾಗಿ ನಾಶ ಮಾಡಿದುದನ್ನೇ, ಅದಕ್ಕೆ ಬದಲಾಗಿ ಪಾಶ್ಚಾತ್ಯ ಸಂಸ್ಕೃತಿಯನ್ನು ಭಾರತೀಯರ ಮೇಲೆ ಹೇರಲಿಕ್ಕೆ ಪ್ರಯತ್ನಿಸಿದದನ್ನೇ ಚರಿತ್ರೆ ಹೆಚ್ಚಾಗಿ ಹೇಳುತ್ತದೆ. ಆದರೆ ಭಾರತೀಯ ಸಂಸ್ಕೃತಿ ಲೌಕಿಕಕ್ಕಿಂತ ಹೆಚ್ಚಾಗಿ ಶಾಶ್ವತವಾದ, ನಿರಂತರವಾದ ಸತ್ಯದೆಡೆಗೆ ಬೆರಳು ತೋರಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು ಯಾರಿಂದಲೂ ನಾಶಮಾಡಲಾಗಲಿಲ್ಲ. ಅದಕ್ಕೆ ಬದಲಾಗಿ ಹಾಗೆ ನಾಶಮಾಡಲು ಪ್ರಯತ್ನಿಸಿದವರೆಲ್ಲಾ ಇಂದು ಭಾರತದ ಕಡೆಗೆ ದೃಷ್ಟಿಹಾಯಿಸಿ ಈ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇದಕ್ಕೆ ಕಾರಣ ಹಿಂದೂ ಸಂಸ್ಕೃತಿಯ ತಳಹದಿ ಹಿಂದೂ ಧರ್ಮ ಅಥವಾ ಸನಾತನ ಧರ್ಮ. ಇದು ಸ್ವಾಮಿ ವಿವೇಕಾನಂದರು ಹೇಳಿರುವಂತೆ, ''ಭಾರತದಿಂದ ಧರ್ಮ ನಶಿಸಿದಲ್ಲಿ ಇಡೀ ಪ್ರಪಂಚವೇ ನಶಿಸುವುದು.'' ಇದು ಋಷಿ ವಾಣಿ.

ಭಾರತ ವಿಶಾಲವಾದ ದೇಶ. ಹಲವಾರು ಪ್ರಾಂತಗಳು, ಹಲವಾರು ಭಾಷೆಗಳು, ಹಲವಾರು ಸಂಸ್ಕೃತಿಗಳು, ಆಚಾರ ವಿಚಾರಗಳು, ಆಹಾರ ವಿಹಾರಗಳು ಎಲ್ಲವೂ ಬೇರೆ ಬೇರೆ. ಆದರೆ ಎಲ್ಲವೂ ನಿಂತಿರುವುದು ಮೂಲ ಆಧಾರವಾದ ಧರ್ಮದ ಮೇಲೆ, ಧರ್ಮದಲ್ಲೂ ಹಲವಾರು ದೇವದೇವತೆಗಳು, ಹಲವಾರು ಪೂಜಾಕ್ರಮಗಳು, '**ಏಕಂ ಸತ್ ವಿಪ್ರಾ ಬಹುಧಾ ವದಂತಿ**' ಎಂದು ಯಾವುದನ್ನು ಸಾವಿರಾರು ವರ್ಷಗಳ ಹಿಂದೆ ಋಷಿಗಳು ಹೇಳಿಹೋದರೋ, ಅಂದರೆ ಮೂಲ ತತ್ತ್ವವೊಂದೇ, ಆದರೆ ಅದನ್ನು ನಾನಾ ವಿಧವಾಗಿ ಹೇಳುತ್ತಾರೆ. ವಿಭಿನ್ನತೆಯಲ್ಲಿ ಏಕತೆಯನ್ನು ಕಾಣುವುದೇ ಭಾರತದ ವಿಶೇಷ. ನೀನೇ ಈ ಪ್ರಪಂಚವನ್ನು ಸೃಷ್ಟಿಸಿರುವ ಭಗವಂತ ಅದನ್ನು ಅರಿಯುವುದೇ ಜೀವನದ ಗುರಿ ಎಂದು ಘಂಟಾಘೋಷವಾಗಿ, ಸ್ಪಷ್ಟವಾಗಿ ಪ್ರಪಂಚದ ಯಾವ ಧರ್ಮವೂ ಸಾರಿಲ್ಲ, ಭಾರತೀಯರ ಗಮನ ಕೇಂದ್ರೀಕೃತವಾಗಿದ್ದು ಅತೀಂದ್ರಿಯದ ಕಡೆಗೇ ಎನ್ನುವುದು ಇನ್ನೂ ವಿಶೇಷ. ಇಂದ್ರಿಯ ಲಭ್ಯವಾದ ಸುಖಗಳೆಲ್ಲಾ ಕ್ಷಣಿಕ. ಅವುಗಳನ್ನು ಗೆದ್ದು ಶಾಶ್ವತ ಶಾಂತಿಯನ್ನು ಪಡೆಯುವುದು ಜೀವನದ ಗುರಿ ಎಂದು ಯಾವುದನ್ನು ಹೇಳುತ್ತೇವೆಯೋ, ಅಂತಹ ಬೋಧನೆಗಳನ್ನು ತಮ್ಮದೇ ಆದ ರೀತಿಯಲ್ಲಿ ಬೋಧಿಸಿ, ಭಾರತೀಯ ಸಂಸ್ಕೃತಿಯನ್ನು ಬೆಳೆಸಿ ಹೋಗಿದ್ದಾರೆ.

ಅವರಲ್ಲಿ ಕರ್ನಾಟಕದ ಕೆಲವು ಸಂತರನ್ನು ಪರಿಚಯಿಸಿಕೊಳ್ಳೋಣ. ಮುಖ್ಯರಾದ ಸಂತರುಗಳೆಂದರೆ ಪುರಂದರದಾಸರು, ಕನಕದಾಸರು, ಬಸವೇಶ್ವರರು, ಶಿಶುನಾಳ ಷರೀಫರು, ವಿಜಯದಾಸರು, ಸಿದ್ಧಾರೂಢರು, ವಾದಿರಾಜರು, ರಾಘವೇಂದ್ರ ಸ್ವಾಮಿಗಳು, ಮಧ್ವಾಚಾರ್ಯರು, ಅಲ್ಲಮಪ್ರಭು, ಜಯತೀರ್ಥರು, ನರಸಿಂಹ ಸರಸ್ವತಿಗಳು, ವ್ಯಾಸರಾಜರು, ಗೋಪಾಲದಾಸರು, ಶ್ರೀಧರಸ್ವಾಮಿಗಳು, ಮುಕುಂದೂರು ಸ್ವಾಮಿಗಳು. ಅವರಲ್ಲಿ ಕೆಲವರನ್ನು ಪರಿಚಯಿಸಿಕೊಳ್ಳೋಣ.

### ಪುರಂದರದಾಸರು

ಅವರ ಮೊದಲ ಹೆಸರು ಶ್ರೀನಿವಾಸ ನಾಯಕ. ಪುರಂದರ ದಾಸರ ತಂದೆ ವರದಪ್ಪನಾಯಕ. ಅವರು ಲೇವಾದೇವಿ ವೃತ್ತಿ



ಯಲ್ಲಿದ್ದರು. ಶ್ರೀನಿವಾಸ ನಾಯಕ ಬೆಳೆದ ನಂತರ ಜಿಪುಣನಾಗಿ ಬೆಳೆದ. ಅವನ ಪತ್ನಿ ಸರಸ್ವತಿ. ಇವನ ಸ್ವಭಾವಕ್ಕೆ ಅತಿ ವಿರುದ್ಧ. ಅವಳು ಅತ್ಯಂತ ದಾನಶೀಲೆಯಾಗಿದ್ದಳು. ಆದುದರಿಂದ ಯಾವಾಗಲೂ ಪತಿಯ ಕೋಪಕ್ಕೆ ತುತ್ತಾಗುತ್ತಿದ್ದಳು. ಅವನು ಹುಟ್ಟಿದ್ದು ಪಂಢರಾಪುರವಾದರೂ ಬೆಳೆದಿದ್ದೆಲ್ಲಾ ಕರ್ನಾಟಕದ ಹಂಪೆಯಲ್ಲಿ.

ಶ್ರೀನಿವಾಸನು ಭಕ್ತನಾಗಿಲ್ಲದಿದ್ದರೂ ಭಗವಾನ್ ವಿಷ್ಣುವಿನ ಕೃಪೆ ಅವನ ಮೇಲೆ ಅಪಾರವಾಗಿತ್ತು. ಆ ಕೃಪೆಯ ಒಂದು ಘಟನೆ ಅವನ ಜೀವನವನ್ನೇ ಬದಲಾಯಿಸಿಬಿಟ್ಟಿತು. ಒಂದು ದಿನ ವಿಠಲ (ಭಗವಾನ್ ವಿಷ್ಣು) ಶ್ರೀನಿವಾಸನ ಅಂಗಡಿಗೆ ಬಂದು ತನ್ನ ಮಗನ ಉಪನಯನಕ್ಕಾಗಿ ಹಣವನ್ನು ಯಾಚಿಸಿದನು. ಶ್ರೀನಿವಾಸ ಇಲ್ಲ ಎನ್ನದೆ ನಾಳೆ ಬಾ ಎಂದು ಕಳುಹಿಸಿದ. ಜಿಪುಣ ಶ್ರೀನಿವಾಸ ಪ್ರತಿದಿನ ಮಾರನೆಯ ದಿನ ಬರಹೇಳುತ್ತಾ, ಆರು ತಿಂಗಳುಗಳ ಕಾಲ ಮುಂದೆ ಹಾಕಿದನು. ಕೊನೆಗೆ ಬ್ರಾಹ್ಮಣನ ಕಾಟ ತಡೆಯಲಾರದೆ ಒಂದು ಸವಕಲು ನಾಣ್ಯವನ್ನು ಕೊಟ್ಟನು. ಬ್ರಾಹ್ಮಣನು ನೇರವಾಗಿ ಆ ಸವಕಲು ನಾಣ್ಯವನ್ನು ತೆಗೆದುಕೊಂಡು ಶ್ರೀನಿವಾಸನ ಮನೆಗೆ ಹೋಗಿ ಆರು ತಿಂಗಳುಗಳ ಕಾಲ ಒಬ್ಬ ವರ್ತಕ ತನ್ನನ್ನು ಸತಾಯಿಸಿ ಕೊನೆಗೆ ಸವಕಲು ನಾಣ್ಯವನ್ನು ಕೊಟ್ಟ ಕಥೆ ಹೇಳಿದನಂತೆ. ಸರಸ್ವತಿ ಆ ವರ್ತಕ ತನ್ನ ಗಂಡನೇ ಇರಬೇಕೆಂದು ಊಹಿಸಿ ಮರುಕದಿಂದ ತನ್ನ ಬಳಿ ಯಾವ ಧನವಾಗಲೀ, ಆಭರಣವಾಗಲೀ ಇಲ್ಲದೆ ಏನನ್ನೂ ಕೊಡುವ ಪರಿಸ್ಥಿತಿಯಲ್ಲಿಲ್ಲ ಎಂದು ಬೇಸರಪಟ್ಟು ಹೇಳುತ್ತಾಳೆ. ಆಗ ಆ ಬ್ರಾಹ್ಮಣ ಅವಳ ಮೂಗಿನಲ್ಲಿದ್ದ ಮೂಗುತಿಯತ್ತ ನೋಡಿ, ಇದು ನಿನಗೆ ನಿನ್ನ ತವರಿನಲ್ಲಿ ಕೊಟ್ಟ ಮೂಗುತಿಯಷ್ಟೆ. ಅದರ ಮೇಲೆ ನಿನಗೆ ಅಧಿಕಾರವಿದೆ. ಅದನ್ನು ಕೊಡಬಹುದಲ್ಲಾ ಎಂದನು. ಆಗ ಸರಸ್ವತಿ ವಿಧಿಯಿಲ್ಲದೆ ಮೌನದಿಂದ ಅದನ್ನು ತೆಗೆದು ಕೊಟ್ಟಳು. ಬ್ರಾಹ್ಮಣ ಸಂತೋಷದಿಂದ ಅದನ್ನು ತೆಗೆದುಕೊಂಡು ನೇರವಾಗಿ ಶ್ರೀನಿವಾಸನ ಅಂಗಡಿಗೇ ಬಂದು ಅದನ್ನು ಅಡವಿಡಲು ಪ್ರಯತ್ನಿಸಿದ. ಶ್ರೀನಿವಾಸ ಆ ಮೂಗುತಿಯನ್ನು ಗುರುತಿಸಿ, ಅಂಗಡಿಯಲ್ಲೇ ಸ್ವಲ್ಪ ಹೊತ್ತು ಕುಳಿತಿರಲು ಬ್ರಾಹ್ಮಣನಿಗೆ ತಿಳಿಸಿ ತಾನು ಮನೆಗೆ ಓಡಿದ. ಮನೆಯಲ್ಲಿ ಹೆಂಡತಿಯ ಮೂಗಿನಲ್ಲಿ ಮೂಗುತಿ ಕಾಣದೆ, ಏನಾಯಿತೆಂದು ವಿಚಾರಿಸಿದ. ಭಯದಿಂದ ನಡುಗಿದ ಹೆಂಡತಿ, ಸ್ನಾನ ಮಾಡುವಾಗ ಅದನ್ನು ದೇವರ ಮನೆಯಲ್ಲಿ ಇಟ್ಟಿದ್ದೇನೆ, ಮತ್ತೆ ಹಾಕಿಕೊಳ್ಳಲು ಮರೆತೆ ಎಂದಳು. ತಕ್ಷಣ ತರಲು ತಿಳಿಸಿದಾಗ ಅವಳು ದೇವರ ಮನೆಗೆ ಹೋಗಿ. ವಿಷ ಕುಡಿದು ಸಾಯಲು ತೀರ್ಮಾನಿಸಿದಾಗ, ಅವಳ ವಿಷದ ಬಟ್ಟಲಿನೊಳಗೆ ಮೇಲಿನಿಂದ ಮೂಗುತಿ ಬಿದ್ದಿತು. ಆಶ್ಚರ್ಯದಿಂದ ಅವಳು ಅದನ್ನು ತಂದು ಶ್ರೀನಿವಾಸನ ಕೈಯಲ್ಲಿ ಕೊಟ್ಟಳು. ಅವನು ಅದನ್ನು ಕೈಯಲ್ಲಿ ಹಿಡಿದುಕೊಂಡು ಅವಸರ ಅವಸರವಾಗಿ ಅಂಗಡಿಗೆ ಓಡಿ ಬಂದನು. ಹಿಂದಿರುಗಿ ಬಂದು ಶ್ರೀನಿವಾಸ ಡಬ್ಬಿಯನ್ನು ತೆಗೆದು ನೋಡಿದರೆ ಅಲ್ಲಿ ಇಟ್ಟಿದ್ದ ಮೂಗುತಿ ಮಾಯವಾಗಿತ್ತು. ಆಗ ಅವನಿಗೆ, ಇಷ್ಟು ದಿನ ಬರುತ್ತಿದ್ದ ಬ್ರಾಹ್ಮಣ ಬೇರೆ ಯಾರೂ ಅಲ್ಲ, ತನ್ನನ್ನು ಪರೀಕ್ಷಿಸಲು ಸ್ವತಃ ನಾರಾಯಣನೇ ಬ್ರಾಹ್ಮಣನ ವೇಷದಲ್ಲಿ ಬಂದಿದ್ದನೆಂದು ಅರಿತು, ತನ್ನ ಬಗ್ಗೆ ತಾನೇ ನಾಚಿಕೆಪಟ್ಟುಕೊಂಡ ಶ್ರೀನಿವಾಸ, ತನ್ನ ಶ್ರೀಮಂತಿಕೆಯನ್ನು ತೊರೆದು ಹರಿದಾಸನಾಗುವ ನಿರ್ಧಾರ ತೆಗೆದುಕೊಂಡನು. ದೇವರ ದಾರಿ ತೋರಿಸಿದ್ದರ ಬಗ್ಗೆ ಕೃತಜ್ಞತೆಗಾಗಿ ತಮ್ಮ ಹೆಂಡತಿಯ ಜ್ಞಾಪಕಾರ್ಥ ಒಂದು ಕೀರ್ತನೆಯನ್ನು ಪುರಂದರದಾಸರು ರಚಿಸಿದ್ದಾರೆ. ಅಂದಿನಿಂದ ಶ್ರೀನಿವಾಸ ನಾಯಕ ಪುರಂದರದಾಸರಾದರು.

ತಮ್ಮ ಹೆಂಡತಿಯ ಜ್ಞಾಪಕಾರ್ಥ ರಚಿಸಿದ ಕೀರ್ತನೆ ಹೀಗಿದೆ:

ಆದದ್ದೆಲ್ಲ ಒಳಿತೇ ಆಯಿತು । ನಮ್ಮ ।

ಶ್ರೀಧರನ ಸೇವೆ ಮಾಡಲು ಸಾಧನೆ ಸಂಪತ್ತಾಯಿತು ॥

ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಬಾಗಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ ॥ ೧ ॥

ಗೋಪಾಳ ಬುಟ್ಟಿ ಹಿಡಿಯುವುದಕ್ಕೆ
ಭೂಪತಿಯಂತೆ ಗರ್ವಿಸುತ್ತಿದ್ದೆ,
ಆ ಪತ್ನೀ ಕುಲ ಸಾವಿರವಾಗಲಿ
ಗೋಪಾಳ ಬುಟ್ಟಿ ಹಿಡಿಸಿದಳಯ್ಯ ॥ ೨ ॥

ತುಳಸಿ ಮಾಲೆ ಹಾಕುವುದಕ್ಕೆ
ಅರಸನೆಂದು ತಿರುಗುತಲಿದ್ದೆ
ಸರಸಿಜಾಕ್ಷ ಪುರಂದರವಿಠಲನು
ತುಳಸಿ ಮಾಲೆ ಹಾಕಿಸಿದನು ॥ ೩ ॥


ಪುರಂದರದಾಸರ ಪದಗಳು ಮುಂದೆ ಕರ್ನಾಟಕ ಸಂಗೀತ ಪದ್ಧತಿ ಬುನಾದಿಯಾದವು. ಶಾಸ್ತ್ರೀಯ ಸಂಗೀತವನ್ನು ಶ್ರೀಸಾಮಾನ್ಯನಿಗೆ ಪರಿಚಯ ಮಾಡಿಕೊಡಲು ಯತ್ನಿಸಿದ ಪುರಂದರದಾಸರು ಮಾಯಾಮಾಳವಗೌಳ ರಾಗದಿಂದ ಹಿಡಿದು ಹೊಸಬರಿಗೆ ಶಾಸ್ತ್ರೀಯ ಸಂಗೀತವನ್ನು ಕಲಿಸಿಕೊಡುವ ದಾರಿಯ ಬಗೆಗೆ ಯೋಚಿಸಿದರು. ಈಗಲೂ ದಕ್ಷಿಣಭಾರತದ ಶಾಸ್ತ್ರೀಯ ಸಂಗೀತ ಪಾಠಗಳು ಪುರಂದರದಾಸರ ಸರಳೆ, ಜಂಟಿ ವರಸೆಗಳೊಂದಿಗೇ ಆರಂಭಿಸಲ್ಪಡುತ್ತವೆ. ಪುರಂದರ ದಾಸರ 'ಪಿಳ್ಳಾರಿ ಗೀತೆ'ಗಳೂ (ಉದಾ: ಲಂಬೋದರ ಲಕುಮಿಕರ.., ಕೆರೆಯ ನೀರನು ಕೆರೆಗೆ ಚೆಲ್ಲಿ... ಇತ್ಯಾದಿ) ಸಂಗೀತದ ಸ್ವರ-ಸಾಹಿತ್ಯ-ತಾಳಗಳ ಸಂಯೋಜನೆಯನ್ನು ಅಭ್ಯಸಿಸಲು ಮೊದಲ ಮೆಟ್ಟಿಲು. ಕರ್ನಾಟಕ ಶಾಸ್ತ್ರೀಯ ಸಂಗೀತದ ತ್ರಿಮೂರ್ತಿಗಳಲ್ಲೊಬ್ಬರಾದ ಶ್ರೀ ತ್ಯಾಗರಾಜರು ತಮ್ಮ ''ಪ್ರಹ್ಲಾದ ಭಕ್ತಿ ವಿಜಯಂ'' ಎಂಬ ಲೇಖನದಲ್ಲಿ ಶ್ರೀ ಪುರಂದರದಾಸರನ್ನು ತಮ್ಮ ಸಂಗೀತ ಗುರುಗಳೆಂದು ಹೇಳಿಕೊಂಡಿದ್ದಾರೆ. ಹರಿನಾಮ ಸ್ಮರಣೆಯ ರೂಪದಲ್ಲಿ ರಚಿಸಿದ

ಅವರ ಕೃತಿಗಳು ದೇವರ ನಾಮಗಳಾಗಿ ಪ್ರಸಿದ್ಧವಾಗಿವೆ. ಅವರ ಹರಿಭಕ್ತಿ ಹಾಗೂ ಸಂಗೀತಗಳಲ್ಲಿನ ಪಾಂಡಿತ್ಯ ಕನ್ನಡ ಸಾಹಿತ್ಯ ದಲ್ಲೇ ವಿಶಿಷ್ಟ ಸ್ಥಾನವನ್ನು ಪಡೆದು ದಾಸಸಾಹಿತ್ಯವನ್ನು ಶ್ರೀಮಂತ ವಾಗಿಸಿವೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಪಿತಾಮಹರಾದ ಪುರಂದರದಾಸರ ಸಾಧನೆಯನ್ನು ಕಂಡ ಸರ್ವರೂ 'ದಾಸರೆಂದರೆ ಪುರಂದರದಾಸರಯ್ಯಾ ..!'' ಎಂದು ಕೊಂಡಾಡಿದ್ದಾರೆ. ಇವರ ಎಲ್ಲ ಕೀರ್ತನೆಗಳೂ ಕನ್ನಡ ಭಾಷೆಯಲ್ಲಿದ್ದು, ಭಕ್ತಿ ಮಾರ್ಗವನ್ನು ಜನಸಾಮಾನ್ಯರಿಗೆ ಪರಿಚಯ ಮಾಡಿಕೊಡುವ ಉದ್ದೇಶವನ್ನು ಹೊಂದಿದೆ. ಕರ್ನಾಟಕ ಸಂಗೀತಕಾರರುಗಳಲ್ಲಿ ಪುರಂದರದಾಸರ ಕೀರ್ತನೆಗಳ ಪರಿಚಯ ಇಲ್ಲದವರು ಇಲ್ಲವೇ ಇಲ್ಲವೆನ್ನಬಹುದು. ಪುರಂದರದಾಸರು ೫ ಲಕ್ಷ ಹಾಡುಗಳನ್ನು ರಚನೆ ಮಾಡಬೇಕೆಂಬ ಉದ್ದೇಶವಿಟ್ಟುಕೊಂಡಿದ್ದರು. ಅವರು ೪,೭೫,೦೦೦ ಹಾಡುಗಳನ್ನು ರಚನೆ ಮಾಡಿ ಅವತಾರ ಮುಗಿಸಿದರು. ಅವರ ಮಗ ಮಧ್ವಪತಿದಾಸರು ಉಳಿದ ೨೫,೦೦೦ ಹಾಡುಗಳನ್ನು ರಚನೆ ಮಾಡಿದರು ಎಂದು ಹೇಳಲಾಗುತ್ತಿದೆ.

## ಕನಕದಾಸರು

ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. (೧೫೦೮ -೧೬೦೬) ಕರ್ನಾಟಕದಲ್ಲಿ ೧೫-೧೬ನೆಯ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ದಾಸ ಪರಂಪರೆಯಲ್ಲಿ ಕನಕದಾಸರೊಬ್ಬರೇ ಕೆಳಜಾತಿಗೆ ಸೇರಿದವರಾಗಿದ್ದರು. ಅವರಿಗೆ ಕೃಷ್ಣ ಪರಮಾತ್ಮನು ಉಡುಪಿಯಲ್ಲಿ ತಾನು ತನ್ನ ರೂಪವನ್ನು ಹಿಂದಕ್ಕೆ ತಿರುಗಿಸಿಕೊಂಡು ದರ್ಶನ ಕೊಟ್ಟು ಧನ್ಯನಾಗಿಸಿದ್ದನ್ನು, ಮೂರ್ಖ ಜಾತಿವಾದಿಗಳು ಗಮನಿಸಿ, ಜಾತಿ ಪದ್ಧತಿಗಳು ಸಮಾಜದ ಒಂದು ಕಾರ್ಯ ನಿರ್ವಹಣೆಗಾಗಿ ಬಂದಿರುವುದೇ ಹೊರತು, ಮೇಲು, ಕೀಳೆಂದು ವಿಭಜಿಸುವುದಕ್ಕಾಗಲ್ಲ ಎಂಬುದನ್ನು ಅರ್ಥಮಾಡಿಕೊಂಡು ಈ ದೇಶ ವಿಭಜನೆ ಕಾರ್ಯವನ್ನು ಇನ್ನಾದರೂ ನಿಲ್ಲಿಸಬೇಕು ಜನ ಸಾಮಾನ್ಯರೂ ಇದನ್ನು ತೀವ್ರವಾಗಿ ಖಂಡಿಸಬೇಕು. ಉಡುಪಿಯಲ್ಲಿ ಇಂದಿಗೂ ಹಿಂದಿನ ಕಿಂಡಿಯಿಂದ ಭಗವಂತನು ದರ್ಶನ ಕೊಡುತ್ತಾನೆ. ಇದಕ್ಕೆ ಕನಕನ ಕಿಂಡಿ ಎಂದು ಹೇಳಲಾಗುತ್ತದೆ. ಉಚ್ಚ ಜಾತಿಯ ಭಕ್ತರೆಲ್ಲಾ ಇಂದಿಗೂ ಎಲ್ಲಾ ದೇವಸ್ಥಾನಗಳಲ್ಲಿ ಭಕ್ತಿಯಿಂದ, ಕನಕದಾಸರು ರಚಿಸಿರುವ ಹಾಡುಗಳನ್ನು ದೇವರ ಮುಂದೆ ಹಾಡುವುದನ್ನು ಕಾಣಬಹುದು. ಕನಕದಾಸರು ಕರ್ನಾಟಕ ಸಂಗೀತದ ಮೂಲಭೂತ ಸಿದ್ಧಾಂತಗಳಿಗೆ ಕಾಣಿಕೆಯನ್ನಿತ್ತವರು. ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನೀ ದೇವತೆಗಳೆಂದು ಬಣ್ಣಿಸಲಾಗಿದೆ. ಕನಕದಾಸರು ದಂಡನಾಯಕರಾಗಿದ್ದು ಯುದ್ಧ ಒಂದರಲ್ಲಿ ಸೋತ ಅವರಿಗೆ ವೈರಾಗ್ಯವುಂಟಾಗಿ, ಹರಿಭಕ್ತರಾದರು.

ಇವರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಬಾಡ ಗ್ರಾಮದಲ್ಲಿ ೧೫೦೮ರಲ್ಲಿ ಕುರುಬ ಜನಾಂಗಕ್ಕೆ ಸೇರಿದ ಬಚ್ಚಮ್ಮ ಮತ್ತು ಬೀರನಾಯಕ ಎಂಬ ದಂಪತಿಗಳಿಗೆ ಜನಿಸಿದರು. ಕನಕದಾಸರು ಬರಿ ಕುರುಬ ಜಾತಿಗೆ ಸೀಮಿತವಾದ ಭಕ್ತರಾಗಿರದೆ ಎಲ್ಲ ಜಾತಿಗಳಿಗೆ ಬೇಕಾದವರಾಗಿದ್ದರು. ೧೫-೧೬ನೆಯ ಶತಮಾನ ದಲ್ಲೇ ಜಾತಿ ವ್ಯವಸ್ಥೆಯ ಬಗ್ಗೆ ಸಮರ ಸಾರಿದ ಭಕ್ತ ಎಂದರೆ ತಪ್ಪಾಗಲಾರದು.



ಕನಕದಾಸರು ಶ್ರೀ ವ್ಯಾಸರಾಯರ ಮೆಚ್ಚಿನ ಶಿಷ್ಯರು. ವ್ಯಾಸರಾಯರಿಂದ ಮಧ್ವ ತತ್ವಶಾಸ್ತ್ರವನ್ನು ಕಲಿತು, ಉಡುಪಿಯ ಶ್ರೀಕೃಷ್ಣನ ಅನನ್ಯ ಭಕ್ತರಾಗಿದ್ದರು. ಕಾಗಿನೆಲೆಯ ಆದಿಕೇಶವನ ಭಕ್ತರಾಗಿದ್ದರು. ಅವರ ಕೀರ್ತನೆಗಳ ಅಂಕಿತ ಕಾಗಿನೆಲೆಯ ಕೇಶವ ರಾಯ ಎಂಬುದು. ಇವರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳನ್ನು ರಚಿಸಿ ಸಂಗೀತ ಪ್ರಪಂಚಕ್ಕೆ ಕೊಟ್ಟಿರುವುದಲ್ಲದೆ, ತನ್ನದೇ ಆದ ಮಂಡಿಗೆ ರಚನೆಗಳ ಮೂಲ ಕವೂ ತಮ್ಮ ಸೇವೆ ಸಲ್ಲಿಸಿದ್ದಾರೆ. ಇವರ ಐದು ಮುಖ್ಯ ಕಾವ್ಯಕೃತಿಗಳು ಇಂತಿವೆ: ೧) ಮೋಹನ ತರಂಗಿಣಿ ೨) ನಳ ಚರಿತ್ರೆ ೩) ರಾಮಧ್ಯಾನ ಚರಿತ್ರೆ ೪) ಹರಿಭಕ್ತಿಸಾರ ೫) ನೃಸಿಂಹಸ್ತವ (ಉಪಲಬ್ಧವಿಲ್ಲ). ಕನಕದಾಸರ ಭಕ್ತಿಪಾರಮ್ಯವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಶ್ರೀಹರಿಯನ್ನು ತಮ್ಮ

ಧಣಿಯಾಗಿ ಇನಿಯನನ್ನಾಗಿ, ಅಣೋರಣೀಯನಾಗಿ, ಮಹತೋ ಮಹೀಯಾನನನ್ನಾಗಿ ಅವರು ಕಂಡಿದ್ದಾರೆ.

ಜೈನ-ವೀರಶೈವರ ಕಿತ್ತಾಟ, ಮುಸಲ್ಮಾನರ ಪ್ರಾಬಲ್ಯ ಇವುಗಳಿಂದ ಸೊರಗಿ ಹೋಗಿದ್ದ ವೈದಿಕ ಧರ್ಮಕ್ಕೆ ಪುನಶ್ಚೇತನ ನೀಡಲು ವ್ಯಾಸರಾಯರಂಥವರು ಶ್ರಮಿಸುತ್ತಿದ್ದ ಕಾಲವದು. ವೈದಿಕ ಸಂಸ್ಕೃತಿಯ ಉತ್ಥಾನಕ್ಕೆಂದು ಹುಟ್ಟುಹಾಕಲಾದ ವಿಜಯನಗರ ಸಾಮ್ರಾಜ್ಯ ಕೃಷ್ಣದೇವರಾಯನ ಅಳಿವಿನ ನಂತರ ಪತನದ ಹಾದಿ ಹಿಡಿದಿತ್ತು. ಇಂಥಲ್ಲಿ ಕನಕದಾಸರಂಥವರ ಕಾವ್ಯಕೃಷಿ ಹಾಗೂ ಸಾರ್ವಜನಿಕ ಜೀವನ ವ್ಯಾಸರಿಗೆ ಬೆಂಬಲದ ಶ್ರೀರಕ್ಷೆಯಾಗಿದ್ದವು.


ಪುರಂದರದಾಸ, ಕನಕದಾಸ, ಜಗನ್ನಾಥದಾಸ ಮೊದಲಾದವರ ಪ್ರಾತಿನಿಧಿಕ ಸಂಘಟನೆಯೇ ದಾಸಕೂಟ. ಇವರೂ ಮಾಧ್ವಮತ ಪ್ರಮೇಯಗಳನ್ನೇ ಪಸರಿಸುತ್ತಾ ಆಚರಿಸುತ್ತಿದ್ದರಾದರೂ ಅವುಗಳನ್ನು ಅರಿಯಲು ಸಂಸ್ಕೃತ ಜ್ಞಾನದ ಅನಿವಾರ್ಯತೆಯನ್ನು ನಿರಾಕರಿಸಿ, ಜಾತಿಮತಗಳ ಕಟ್ಟುಪಾಡಿಲ್ಲದ ಇವರು ಶಾಸ್ತ್ರಾಧ್ಯಯನದ ಅನಿವಾರ್ಯತೆ ಇಲ್ಲದೆ ತಮ್ಮ ಅನುಭಾವದಿಂದ ಹೊರಹೊಮ್ಮುವ ಭಕ್ತಭಾವನೆಗಳನ್ನು ತಮ್ಮ ತಾಯ್ನುಡಿಯಲ್ಲಿ ಹಾಡಿ ಲೋಕಪಾವನವನ್ನೂ ಆತ್ಮೋದ್ಧಾರವನ್ನು ಮಾಡಬೇಕೆನ್ನುವವರು. ಇಂತಹ ದಾಸಕೂಟವನ್ನು ಹುಟ್ಟುಹಾಕಿ ಪೋಷಿಸಿ ಬೆಳೆಸಿದವರು ವ್ಯಾಸರಾಯರು ಹಾಗೂ ವಾದಿರಾಜರು. ಇಷ್ಟಿದ್ದರೂ ದಾಸಕೂಟ, ವ್ಯಾಸಪೀಠಗಳ ನಡುವೆ ಆಗಿಂದಾಗ್ಗೆ ಘರ್ಷಣೆಗಳು ನಡೆದೇ ಇದ್ದವು. ಇವನ್ನು ಹೋಗಲಾಡಿಸಲು ಶ್ರಮಿಸಿದವರು ಪುರಂದರದಾಸರು ಹಾಗೂ ಕನಕದಾಸರು.

ಕನಕದಾಸರ ಕೀರ್ತನೆಗಳಲ್ಲಿ ಅವರ ಸಂದೇಶ ನೇರ ಮತ್ತು ಖಚಿತ. ಹಾಗೆಯೇ ಅಮೂರ್ತವಾದ ಪ್ರತಿಮಾನಿರೂಪಣೆಯಲ್ಲಿ ಪರಿಣಿತಿ, ಹಾಗೂ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತ ಸಾಹಿತ್ಯ ಗಳ ಪರಿಚಯವನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು.

## ಜಯತೀರ್ಥರು

ಜಯತೀರ್ಥರು ದ್ವೈತವೇದಾಂತದಲ್ಲಿ ಮಧ್ವಾಚಾರ್ಯರ ಅನಂತರ ಅತ್ಯಂತ ಪ್ರಭಾವಶಾಲೀ ವ್ಯಕ್ತಿತ್ವವನ್ನು ಪ್ರದರ್ಶಿಸಿದ ವಿದ್ವಾಂಸರು, ವೇದಾಂತಿಗಳು. ಇವರು ಟೀಕಾಚಾರ್ಯರೆಂಬ ಹೆಸರಿನಿಂದಲೇ ಜನಪ್ರಿಯರಾಗಿದ್ದಾರೆ. ಹೈದರಾಬಾದು ಮತ್ತು ಮಹಾರಾಷ್ಟ್ರ ವಿಭಾಗದಲ್ಲಿ ದ್ವೈತಮತ ಹಾಗೂ ಭಕ್ತಿಮಾರ್ಗ ಪ್ರಚಾರಕ್ಕೆ ಹೆಚ್ಚಾಗಿ ಕಾರಣರಾದವರು ಜಯತೀರ್ಥರು. ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಕಾಗಿಣೀ ನದಿಯ ತೀರದಲ್ಲಿ ಇದ್ದ ಮಳಖೇಡ ಇವರ ಕಾರ್ಯಕೇಂದ್ರವಾಗಿತ್ತು.

ಬ್ರಹ್ಮಸೂತ್ರಗಳಿಗೆ ಮಧ್ವಾಚಾರ್ಯರು ಬರೆದ ಮಹಾಭಾಷ್ಯವನ್ನು ಸಮಂಜಸವಾಗಿ ಅರ್ಥಮಾಡಿಕೊಳ್ಳಲು ಇವರು ಬರೆದ ತತ್ತ್ವಪ್ರಕಾಶಾದಿ ವ್ಯಾಖ್ಯಾನಗಳಿಗೇ ಮೊರೆಹೋಗಬೇಕು. ಮಧ್ವವೇದಾಂತದಲ್ಲಿ ಪ್ರವೇಶ ಪಡೆಯುವದಕ್ಕೆ ಮಹಾದ್ವಾರ ದಂತಿದೆ ಇವರ ಪಾದಾವಳಿ ಎಂಬ ಗ್ರಂಥ. ನ್ಯಾಯಸುಧಾ ಇವರ ಬೃಹತ್ ಗ್ರಂಥ. **ಸುಧಾ ವಾ ಪಠನೀಯಾ, ವಸುಧಾ ವಾ ಪಾಲನೀಯಾ** – 'ಸುಧಾ ಓದಬೇಕು, ಪ್ರಪಂಚವ ನ್ನಾಳಬೇಕು' ಎಂಬುದು ಆಗಿನ ಆದರ್ಶವಾಗಿತ್ತು. ವೇದಾಂತ ಪ್ರಪಂಚದಲ್ಲಿ ಈ ಗ್ರಂಥಕ್ಕೆ ಅಂತಹ ಮನ್ನಣೆಯಿದೆ.



ಇವರ ಕಾಲ ೧೪ನೆ ಶತಮಾನ. ಮಂಗಳವೇಢೆ ಗ್ರಾಮದ ದೇಶಪಾಂಡೆ ಮನೆತನದಲ್ಲಿ ಇವರು ಜನಿಸಿದರು. ಇವರ ಬಾಲ್ಯನಾಮ ಧೋಂಡೋ ಪಂತ ಎಂದು. ಶ್ರೀಮಂತಿಕೆ ಮತ್ತು ರಾಜಕೀಯ ಅಧಿಕಾರಗಳು ಹೇರಳವಾಗಿದ್ದ ಮನೆಯಲ್ಲಿ ಬೆಳೆದವರಾಗಿ ಜಯತೀರ್ಥರು ಸ್ವೇಚ್ಛೆಯಾಗಿ ಉಂಡು ತಿಂದು, ಕುದುರೆ ಸವಾರಿ, ಓಡಾಟಗಳಲ್ಲಿ ಕಾಲ ಕಳೆಯುತ್ತಾ ದೊಡ್ಡವರಾದರು.

ಒಮ್ಮೆ ಮದುವೆಯಾದ ಹೊಸದರಲ್ಲಿ ಕುದುರೆ ಸವಾರಿ ಹೊರಟ ಕುಮಾರ ದೇಶಪಾಂಡೆ ಭೀಮಾ ನದಿಯನ್ನು ತಲುಪುವ ಹೊತ್ತಿಗೆ ಮಧ್ಯಾಹ್ನವಾಗಿ ಬಾಯಾರಿಕೆಯಾಯಿತಂತೆ. ಭೀಮಾ ನದಿಯಲ್ಲಿ ಕುದುರೆಯನ್ನು ಈಜುಬಿಟ್ಟು ಕುದುರೆ ಮುಳುಗುವಷ್ಟು ಬಂದ ನದೀಪ್ರವಾಹಕ್ಕೆ ಬಾಯಿ ಹಚ್ಚಿ ನೀರು ಕುಡಿಯಲಾರಂಭಿಸಿದರು. ಎದುರಿನಲ್ಲಿ ದಡದಲ್ಲಿ ಕುಳಿತು ಇದನ್ನೆಲ್ಲ ನೊಡುತ್ತಿದ್ದ ವೃದ್ಧ ತಾಪಸ ಯತಿ ಅಕ್ಷೋಭ್ಯತೀರ್ಥರು ಈ ತರುಣರನ್ನು ಕೂಗಿ ಕರೆದು ''ಕಿಂ ಪಶುಃ ಪೂರ್ವ ದೇಹೇ'' ಹಿಂದಿನ ಜನ್ಮದಲ್ಲಿ ತಾವು ಮಧ್ವಾಚಾರ್ಯರ ಗ್ರಂಥ ಭಾರವನ್ನು ಹೊತ್ತ ಎತ್ತೆಂಬ ಭಾವ ಸ್ಫುರಿಸಿ ತನ್ನ ಮೇಲೆ ದ್ವೈತ ವೇದಾಂತ ಜ್ಞಾನ ಸಂಪಾದನೆ ಹಾಗೂ ಸಮರ್ಥನೆಗಳ ಭಾರವಿದೆಯೆಂಬ ಪ್ರಜ್ಞೆ ಇವರಲ್ಲಿ ಉದಯವಾಗುವಂತೆ ಮಾಡಿದರು. ದಡ ತಲುಪಿ ಅಕ್ಷೋಭ್ಯತೀರ್ಥರ ಅಡಿಗೆರಗಿದರು. ಆ ತೇಜಸ್ವೀ ಯುವಕನ ಭವಿಷ್ಯ ಅಕ್ಷೋಭ್ಯತೀರ್ಥರ ಕಣ್ಣೆದುರಿಗೆ ಸ್ಪಷ್ಟವಾಗಿ ಕಂಡಿತು. ಗೃಹಸ್ಥ ಜೀವನವನ್ನು ತ್ಯಜಿಸಿ ಅಕೋಭ್ಯತೀರ್ಥರಿಂದ ಸಂನ್ಯಾಸ ದೀಕ್ಷೆ ಸ್ವೀಕರಿಸಿ ಜಯತೀರ್ಥ ಯತಿಗಳಾದರು. ಇವರೂ ಇವರ ಗುರುಗಳೂ ಇಬ್ಬರೂ ಅದ್ವೈತ ಯತಿಗಳಾದ ವಿದ್ಯಾರಣ್ಯ ಯತಿಗಳ ಸಮಕಾಲೀನರು.

## ಬಸವೇಶ್ವರ

ಬಸವಣ್ಣ, ಬಸವ ಅಥವಾ ಬಸವೇಶ್ವರರು ಭಾರತದ ೧೨ನೆಯ ಶತಮಾನದ ಹಿಂದೂ ತತ್ವಜ್ಞಾನಿ. ಅವರ ಜೀವನ

ಚರಿತ್ರೆ ವಿಶಾಲವಾದದ್ದು ಹಾಗೂ ಬಾಲ್ಯದಿಂದಲೇ ಕ್ರಾಂತಿಕಾರಕವಾದ್ದದು. ಅವರು ಜನ್ಮತಾಳಿದ್ದು ೧೧೩೪ರಲ್ಲಿ. ಈಗಿನ ಬಿಜಾಪುರ ಜಿಲ್ಲೆಯಲ್ಲಿರುವ ಬಸವನ ಬಾಗೇವಾಡಿ ಗ್ರಾಮದಲ್ಲಿ. ಅವರು ಜನಿಸಿದ್ದು ಬ್ರಾಹ್ಮಣ ಕುಲದಲ್ಲಿ. ಆದರೆ ಅವರು ಬಾಲ್ಯದಿಂದಲೂ ವೈದಿಕ ಸಂಸ್ಕೃತಿಯ ಕರ್ಮಾಚರಣೆಗಳ ವಿರೋಧಿಯಾಗಿದ್ದರು. ಅವರ ಎಂಟನೆಯ ವಯಸ್ಸಿನಲ್ಲಿ ಬ್ರಾಹ್ಮಣ ಸಂಪ್ರದಾಯದಂತೆ ಬಸವಣ್ಣನವರಿಗೆ ಜನಿವಾರ ಹಾಕಲು ಬಂದಾಗ, ಬಸವಣ್ಣನವರು ತನಗಿಂತ ಹಿರಿಯಳಾದ ಅಕ್ಕ ನಾಗಮ್ಮನಿಗೆ ಜನಿವಾರ ಹಾಕಲು ಹೇಳುತ್ತಾರೆ. ಆಗ ಇದು ಪುರುಷರಿಗೆ ಮಾತ್ರ ಹಾಕುವಂತಹದು ಆದ್ದರಿಂದ ಅಕ್ಕನಿಗೆ ಕೂಡದು ಎಂದಾಗ, ಬಸವಣ್ಣನು ಪುರುಷ ಮಹಿಳೆ ಅಸಮಾನತೆಯನ್ನು ವಿರೋಧಿಸಿ ಮನೆಯಿಂದ ನಿರ್ಗಮಿಸಿ ಕೂಡಲಸಂಗಮಕ್ಕೆ ಹೊರಡುತ್ತಾರೆ.

**ಧಾರ್ಮಿಕ ಬೆಳವಣಿಗೆಗಳು :** ಅಲ್ಲಿ ಅವರು ಹನ್ನೆರಡು ವರ್ಷಗಳ ಕಾಲ ಹಿಂದೂ ದೇವಸ್ಥಾನದಲ್ಲಿ ಅಧ್ಯಯನ ಮಾಡುತ್ತಿದ್ದರು. ಅವರ ದೃಷ್ಟಿಯಲ್ಲಿ ದೇವನು ಒಬ್ಬ ಮತ್ತು ಅವನು ಮಾನವನಲ್ಲಿದ್ದಾನೆಯೇ ಹೊರತು ಗುಡಿಗುಡಾರಗಳಲ್ಲಿ ಅಲ್ಲ. ಕೆಲಸ ಮಾಡಿ ಜೀವನ ನಡೆಸಬೇಕು, ಆಲಸಿ ಜೀವನ ಸಲ್ಲ. ಸುಳ್ಳು ಹೇಳುವುದು, ಪ್ರಾಣಿಬಲಿ ನೀಡುವುದು, ಪರಧನ ಹರಣ, ಪರಸ್ತ್ರೀ ವ್ಯಾಮೋಹ ಹೊಂದುವುದು ಘೋರ ಅಪರಾಧ.

ಕೆಲಸದಲ್ಲಿ ಮೇಲು-ಕೀಳು ಎಂಬುದಿಲ್ಲ, ಪುರುಷನಂತೆ ಮಹಿಳೆಗೂ ವಿದ್ಯಾಭ್ಯಾಸದ ಮತ್ತು ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಕ್ಕಿದೆ. ಹೀಗೆ ಸಮಾನತೆ, ಕಾಯಕ, ದಾಸೋಹ ತತ್ತ್ವಗಳನ್ನು ಸ್ವೀಕರಿಸುವ ಮತ್ತು ಆಚರಿಸುವ ಯಾರು ಬೇಕಾದರೂ ಶಿವಶರಣರಾಗಬಹುದು ಎಂದು ಬಸವಣ್ಣನವರು ಸಾರಿದರು. ಪೊಳ್ಳು ದೇವರುಗಳನ್ನು ಸ್ತುತಿಸುತ್ತಿದ್ದ ಮತ್ತು ಪುರೋಹಿತರು ಕಡೆಯಿಂದ ನಿರಂತರವಾಗಿ ವಂಚಿತರಗೊಳಗಾಗುತ್ತಿದ್ದ ಜನತೆಗೆ ಬಸವಣ್ಣನವರು ಹೊಸ ಜೀವನ ನೀಡಿದರು.

ಬಸವಣ್ಣನವರು ತಮ್ಮ ವಚನಗಳ ಮೂಲಕ 'ಕಾಯಕವೇ ಕೈಲಾಸ', 'ದಯವೇ ಧರ್ಮದ ಮೂಲ' ಮತ್ತು 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂದರ್ಥ ಬರುವ ವಚನಗಳ ಮೂಲಕ ತಮ್ಮ ಮಾನವತಾ ಧರ್ಮಕ್ಕೆ ಸಾಹಿತ್ಯದ ಸ್ಪರ್ಶ ನೀಡಿದರು. ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಅವರು ನೀಡಿದ ಕೊಡುಗೆ ಅಪಾರ.

ಇವರ ಸಮಕಾಲೀನರಾಗಿದ್ದ ಉಳಿದ ಶರಣರೂ ಕಡಿಮೆಯೇನಿಲ್ಲ. ಭಗವಂತನ ಸಾಕ್ಷಾತ್ಕಾರ, ಅಂತರ್ಜ್ಞಾನ ಯಾವ ಜಾತಿಯವರ ಸ್ವತ್ತಲ್ಲ ಎಂಬುದನ್ನು ಕೀಳುಜಾತಿಯಲ್ಲಿದ್ದ ಹಲವಾರು ಜನರು ಶರಣರುಗಳಾಗಿ ತಮ್ಮ ಜೀವನದಿಂದ, ಜ್ಞಾನದಿಂದ ಅದಕ್ಕಿಂತಲೂ ಹೆಚ್ಚಾಗಿ ತಮ್ಮ ವಚನಗಳಿಂದ ತೋರಿಸಿ ದೇಶದಲ್ಲಿದ್ದ ಅಸಮಾನತೆಯನ್ನು ತೊಡೆದು ಹಾಕಿದರು. ಈ ಶರಣರ ಸಂಖ್ಯೆ ಅಪಾರ. ಅವರ ಜೀವನ ಹಾಗೂ ಅವರ ವಚನಗಳನ್ನೆಲ್ಲಾ ಒಂದೆಡೆ ಸೇರಿಸಿದರೆ ಅವುಗಳು ವೇದಗಳೇ ಆಗಿ ಬಿಡುವವು. ಉರಿಲಿಂಗ ಪೆದ್ದಿಗಳು ಎನ್ನುವ ಒಬ್ಬ ಶರಣ ವಚನಕಾರರು ಅಂತ್ಯಜರು. ಅವರ ಧರ್ಮಪತ್ನಿ ಕಾಳವ್ವೆ ಒಂದು ವಚನದಲ್ಲಿ, ''ಕೃತ್ಸ್ನ ಕಾಯಕವಿಲ್ಲದವರು ಭಕ್ತರಲ್ಲ ಸತ್ವ ಶುದ್ಧವಿಲ್ಲದುದು ಕಾಯಕವಲ್ಲ. ಆಸೆಯೆಂಬುದು ಭವದ ಬೀಜ. ನಿರಾಸೆಯೆಂಬುದು ನಿತ್ಯ ಮುಕ್ತಿ'' ಎಂದು ಹೇಳುತ್ತಾಳೆ. ಇದು ''ಕುರ್ವನ್ನೇವೇಹ ಕರ್ಮಾಣಿ....'' ಎಂಬ ಉಪನಿಷತ್ ವಾಣಿಯನ್ನು ಪ್ರತಿಧ್ವನಿಸುತ್ತದೆ. 'ಕಾಯಕವೇ ಕೈಲಾಸ' ಎಂಬ ತತ್ತ್ವದ ಶರಣರ ಪರಿ ಇದೇ.

ಇಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಒಬ್ಬ ದಲಿತ ಮಹಿಳೆ ಶರಣಸಂಕುಲದೊಳಗೆ ಬಂದು ಇಷ್ಟೊಂದು ಮಹತ್ತರವಾದ ವಿಚಾರಗಳನ್ನೊಳಗೊಂಡ ವಚನ ರಚನೆ ಮಾಡಿದ್ದಾಳೆಂದರೆ ಬಸವಣ್ಣನವರು ಜಗತ್ತಿನಲ್ಲಿ ಮೊದಲ ಬಾರಿಗೆ ಯಾವ ರೀತಿ ವಯಸ್ಕರ ಶಿಕ್ಷಣದ ವ್ಯವಸ್ಥೆ ಮಾಡಿರಬಹುದು ಎಂಬುದನ್ನು ಕುರಿತು ಚಿಂತಿಸಬೇಕು. ಈಗಿನ ಬುದ್ಧಿ ಜೀವಿಗಳು ರಾಜಕೀಯ ಕಾರಣಕ್ಕಾಗಿ, ಹೆಸರು ಹೊಗಳಿಕೆಗಾಗಿ ಅಸಮಾನತೆಯ ಬಗ್ಗೆ ಆಕಾಶ ಕೇಳುವಂತೆ ಕಿರಿಚುವ ಬದಲು, ಇಂತಹ ನೂರಾರು, ಸಾವಿರಾರು ವಚನಗಳನ್ನು, ಕೊಳೆಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ದಲಿತರೆಂದು ತುಳಿಯಲ್ಪಡುತ್ತಿರುವ ಜನರ ಮಧ್ಯೆ ಇಂತಹ ಶರಣರ ಜೀವನಗಳನ್ನು, ಅವರ ವಚನಗಳನ್ನು, ಅವರು ಎಂತಹ ಕೀಳು ಜಾತಿಯಿಂದ ಬಂದು ಮಹಾತ್ಮರಾದರೆಂಬುದನ್ನು ಸಾರಿದರೆ, ಅವರಲ್ಲಿ ಹಲವಾರು ಶರಣರುಗಳನ್ನು ಉತ್ಪತ್ತಿ ಮಾಡಿದರೆ ಒಮ್ಮೆಗೇ ಈ ದಲಿತರ ಸಮಸ್ಯೆಯನ್ನು ನಮ್ಮ ದೇಶದಿಂದ ಹೊಡೆದೋಡಿಸಬಹುದು. ಎಲ್ಲಾ ಮಾಧ್ಯಮಗಳೂ ಇಂತಹ ಕಾರ್ಯದಲ್ಲಿ ಪೂರ್ಣ ಸಹಕರಿಸಿದರೆ ಅವರುಗಳ ಗೌರವವೂ ಹೆಚ್ಚುತ್ತದೆ. ಅಲ್ಲಲ್ಲಿ ನಡೆಯುತ್ತಿರುವ ದಲಿತರಿಗಾಗಿ ಆಗುತ್ತಿರುವ ಅನ್ಯಾಯಗಳನ್ನು ಬೆಳಕಿಗೆ ತರುವುದರಲ್ಲಿ ಮಾತ್ರ ಆಗುವ ಲಾಭವೇನು? ಅದರ ಪರಿಹಾರದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಡವೇ? ಇದಕ್ಕಾಗಿ ಕರ್ನಾಟಕದ ನಮ್ಮ ಹಳೆಯ ಸಂತರು ವಹಿಸಿದ್ದ ಶ್ರಮವನ್ನು, ಅವರ ಕೊಡುಗೆಯನ್ನು ಶಾಲಾ ಪಠ್ಯಪುಸ್ತಕಗಳಲ್ಲಿ ತುಂಬಿ ಬಾಲ್ಯದಿಂದ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು.

ಈ ದಿಕ್ಕಿನಲ್ಲಿ ಹಾಗೂ ಇತರ ಹಲವಾರು ಕ್ಷೇತ್ರಗಳಲ್ಲಿ ಭಾರತೀಯ ಸಂಸ್ಕೃತಿಗೆ ಕೊಡುಗೆ ಕೊಟ್ಟಿರುವ ಸಂತರ ಹೆಸರುಗಳನ್ನು ಹೇಳುವುದಾದರೆ ಶಿಶುನಾಳ ಶರೀಫರು, ವಿಜಯ ವಿಠಲದಾಸರು, ಸಿದ್ಧಾರೂಢರು, ವಾದಿರಾಜರು, ರಾಘವೇಂದ್ರ ತೀರ್ಥರು, ಮಧ್ವಾಚಾರ್ಯರು, ಅಲ್ಲಮ ಪ್ರಭುಗಳು, ಅಕ್ಕ ಮಹಾದೇವಿ, ವಿದ್ಯಾರಣ್ಯ, ಜಯತೀರ್ಥ ನರಸಿಂಹ ಸರಸ್ವತಿ, ವ್ಯಾಸರಾಜ, ರಾಘವೇಂದ್ರ ಸ್ವಾಮಿ, ಗೋಪಾಲದಾಸ ಮುಂತಾದವರು.